ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1

ಸಂಖ್ಯೆ: ಸಿ3(7) ಪ್ರಾ.ಶಿ ವರ್ಗಾ ಜ್ಞಾ.ಪ.01/2014-15 ದಿನಾಂಕ:-28-05-2014

ಜ್ಞಾಪನಾ

ವಿಷಯ:- 2014-15 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಖಾಲಿ ಹುದ್ದೆಗಳನ್ನು ಅಪ್ ಲೋಡ್ ಮಾಡುವ ಬಗ್ಗೆ

ಉಲ್ಲೇಖ:- 1. ಈ ಕಛೇರಿ ಅಧಿಕೃತ ಜ್ಞಾಪನಾ ಸಂಖ್ಯೆ- ಸಿ3(7) ಪ್ರಾ.ಶಿ ವರ್ಗ/01/2014-15
ದಿನಾಂಕ:- 23-05-2014

---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2014-15 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಈ ಕಛೇರಿಯಿಂದ ಅಧಿಕೃತ ಜ್ಞಾಪನಾ ಹೊರಡಿಸಲಾಗಿದ್ದು ಶಿಕ್ಷಕರ ವರ್ಗಾವಣೆಗೆ ತಮ್ಮ ಜಿಲ್ಲೆಗಳಲ್ಲಿ ಸರ್ಕಾರಿ ಹಿರಿಯ/ ಕಿರಿಯ/ ಮಾದರಿ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಪ್ರೌಢ ಶಾಲೆಗಳಲ್ಲಿ ಸ್ಪಷ್ಟ ಖಾಲಿ ಹುದ್ದೆ ಮತ್ತು ವಿಷಯವಾರು ರಾಜ್ಯ ವಲಯದ ಮತ್ತು ಎಸ್.ಎಸ್.ಎ ವತಿಯಿಂದ ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ವರ್ಗಾವಣೆ ಮೂಲಕ ಶಿಕ್ಷಕರನ್ನು ಭರ್ತಿ ಮಾಡ ಬೇಕಾಗಿರುವುದರಿಂದ ದಿನಾಂಕ:-31-05-2014 ರಲ್ಲಿದ್ದಂತೆ ಪರಿಶೀಲಿಸಿಕೊಂಡು ಕಂಪ್ಯೂಟರ್ ಮೂಲಕ ತಂತ್ರಾಂಶದಲ್ಲಿ ಅಪ್ ಲೋಡ್ ಮಾಡಲು ತಿಳಿಸಿದೆ.

**ವಿಶೇಷ ಸೂಚನೆ:-**

1) **ಖಾಲಿ ಹುದ್ದೆಗಳನ್ನು ಶಾಲಾ ವಾರು, ವಿಷಯವಾರು, ಒಟ್ಟು ಮಂಜೂರಾದ ಹುದ್ದೆಗಳು, ಮತ್ತು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು, ಖಾಲಿ ಇರುವ ಹುದ್ದೆಗಳು**
2) ಹಾಗೂ ಇನ್ನಿತರ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಸ್ಪಷ್ಟ ಖಾಲಿ ಹುದ್ದೆ ಮತ್ತು ವಿಷಯವಾರು ಖಾಲಿ ಇರುವ ಹುದ್ದೆಗಳನ್ನು ಪರಿಶೀಲಿಸಿಕೊಂಡು ಅಪ್ ಲೋಡ್ ಮಾಡಲು ತಿಳಿಸಿದೆ. ಕಾರಣ ವರ್ಗಾವಣೆ ಸಮಯದಲ್ಲಿ ಗೊಂದಲ ಉಂಟಾಗುತ್ತಿರುವ ಹಿನ್ನಲೆಯಲ್ಲಿ ವಿಶೇಷವಾಗಿ ಗಮನ ಹರಿಸಲು ತಿಳಿಸಿದೆ. ವರ್ಗಾವಣೆ ಸಮಯದಲ್ಲಿ ಗೊಂದಲ ಉಂಟಾದಲ್ಲಿ ಅಥವಾ ನ್ಯಾಯಾಲಯದಲ್ಲಿ ಶಿಕ್ಷಕರು ದಾವೆ ಹೂಡಿದಲ್ಲಿ ತಮ್ಮನ್ನು ನೇರವಾಗಿ ಹೊಣೆಗಾರರನ್ನಾಗಿ ಮಾಡಲಾಗುವುದು.
3) ಹೆಚ್ಚುವರಿ ಎಂದು ಗುರುತಿಸಿರುವ ಶಿಕ್ಷಕರ ಖಾಲಿ ಹುದ್ದೆಗಳನ್ನು ವರ್ಗಾವಣೆಗೆ ತೋರಿಸ ಬಾರದು ಹೆಚ್ಚುವರಿ ಶಿಕ್ಷಕರೆಂದು ಗುರುತಿಸಿ ಸ್ಥಳಾಂತರಗೊಂಡಿದ್ದಲ್ಲಿ ಅಂತಹ ಹುದ್ದೆಗಳನ್ನು ಖಾಲಿ ಹುದ್ದೆ ಎಂದು ಪರಿಗಣಿಸ ಬಾರದು.
4) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ 60 ಕ್ಕಿಂತ ಕಡಿಮೆ ಇದ್ದಲ್ಲಿ ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇದ್ದಲ್ಲಿ ವರ್ಗಾವಣೆ ಕೌನ್ಸಿಲಿಂಗ್ ನಲ್ಲಿ ಭರ್ತಿ ಮಾಡಲು ಅವಕಾಶವಿರುವುದಿಲ್ಲ.
5) ಖಾಲಿ ಹುದ್ದೆಗಳನ್ನು ದಿ: 31 -05- 2014 ರಂದು ಇದ್ದಂತೆ ಪರಿಗಣಿಸಬೇಕು.
6) 2009-10ರ ನಂತರ ಮಂಜೂರಾದ ಎಸ್‌ಎಸ್‌ಎ ಶಿಕ್ಷಕರ ಹುದ್ದೆಗಳನ್ನು ತುಂಬಬಾರದು. [ಕಾರಣ ಎಸ್‌ಎಸ್‌ಎಯಿಂದ ಪ್ರಸಕ್ತ ಸಾಲಿಗೆ ವೇತನಾನುದಾನ ಮಂಜೂರಾಗಿಲ್ಲ]

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)

ಗೆ

ರಾಜ್ಯದ ಎಲ್ಲಾ ಉಪನಿರ್ದೇಶಕರು [ಆಡಳಿತ] ಸಾರ್ವಜನಿಕ ಶಿಕ್ಷಣ ಇಲಾಖೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ

\\Typing3server\E\D\EST3\Trn Memo-2014.doc